# ಕನ್ನಡದಲ್ಲಿ ಶ್ರೀರಾಮಕೃಷ್ಣರ ಜೀವನ ಚರಿತ್ರೆಯ ಗ್ರಂಥಗಳು

**ಡಾ. ವಿಜಯಭಾರತಿ**

ಶ್ರೀರಾಮಕೃಷ್ಣರನ್ನು ಕುರಿತ ಜೀವನಚರಿತ್ರೆಗಳು ಕನ್ನಡದಲ್ಲಿ ಬಹಳ ಹಿಂದಿನಿಂದಲೇ ಪ್ರಕಟವಾಗಿವೆ. ಶ್ರೀರಾಮಕೃಷ್ಣ ಭಾವಧಾರೆ ಕರ್ನಾಟಕದಲ್ಲಿ ಹರಡುವಲ್ಲಿ ಇವು ವಿಶೇಷ ಪಾತ್ರ ವಹಿಸಿವೆ. ಈ ಕುರಿತು ಬರೆದಿರುವ ಲೇಖಕಿ ಬೆಂಗಳೂರು ರಾಮಕೃಷ್ಣ ಮಠದ ಭಕ್ತರು. ಕನ್ನಡ ಸಾಹಿತ್ಯದಲ್ಲಿ ವಿಶೇಷ ಅಧ್ಯಯನ ಮಾಡಿರುವ ಇವರು ಹಲವಾರು ಕನ್ನಡ ಗ್ರಂಥಗಳನ್ನು ರಚಿಸಿದ್ದಾರೆ. ಉತ್ತಮ ವಾಗ್ಮಿಗಳೂ ಆಗಿರುವ ಅವರು ಸಂಗೀತದಲ್ಲೂ ಪರಿಣತರು. ದೂರದರ್ಶನ, ಯೂಟ್ಯೂಬ್‌ಗಳಲ್ಲಿ ಅವರ ಅನೇಕ ಪ್ರವಚನಗಳು ಬಿತ್ತರಗೊಂಡಿವೆ.


ವಿಶ್ವಸಾಹಿತ್ಯದಲ್ಲಿ ಶ್ರೀರಾಮಕೃಷ್ಣ ಸಾಹಿತ್ಯಕ್ಕೆ ಒಂದು ಉನ್ನತವಾದ ಸ್ಥಾನವಿದೆ. ಸರ್ವಧರ್ಮ ಸಮನ್ವಯತೆಯನ್ನು ಕಾಣುವ ಕಣ್ಣನ್ನೂ, ಅರಿಯುವ ಹೃದಯವನ್ನು ಅದು ತಂದುಕೊಟ್ಟಿದೆ. ಭಗವದ್ಗೀತೆ, ಕುರಾನ್, ಬೈಬಲ್ ಈ ಎಲ್ಲ ಧರ್ಮಗ್ರಂಥಗಳ ಸಾಲಿನಲ್ಲಿ 'ವಚನವೇದ'ವೂ ನಿಲ್ಲುತ್ತದೆ. 'ಶ್ರೀರಾಮಕೃಷ್ಣ ಲೀಲಾ ಪ್ರಸಂಗ' ಪರಮಹಂಸರ ಜೀವನವಾಹಿನಿಯಾಗಿದ್ದರೆ, 'ಶ್ರೀರಾಮಕೃಷ್ಣ ವಚನವೇದ' ಅವರ ವಾಗಮೃತವಾಹಿನಿ, ಅಕ್ಷರ ಶರೀರ. ಧಾರ್ಮಿಕ ದೃಷ್ಟಿಯಿಂದಷ್ಟೆ ಅಲ್ಲದೆ ಸಾಹಿತ್ಯದೃಷ್ಟಿಯಿಂದಲೂ ಅದು ಎಲ್ಲ ಸಾಹಿತ್ಯ ಪ್ರಕಾರಗಳ ಸಂಗಮಸ್ಥಾನ. ಕಾವ್ಯಕ್ಕೆ ಕಾವ್ಯ, ಧರ್ಮಗ್ರಂಥಕ್ಕೆ ಧರ್ಮಗ್ರಂಥ. ಓದುಗರು ಪಾಶ್ಚಾತ್ಯರಾಗಲೀ, ಪೌರ್ವಾತ್ಯರಾಗಲಿ, ವಿದ್ಯಾವಂತರಾಗಲಿ, ಅವಿದ್ಯಾವಂತರಾಗಲಿ ಎಲ್ಲರಿಗೂ ಈ ಎರಡು ಮೇರುಕೃತಿಗಳು 'ವಿವೇಕಚೂಡಾಮಣಿ'ಯಾಗಿ ಮನೋವಿಜ್ಞಾನ ಕೈಪಿಡಿಯಾಗಿ ಜನಮನದಲ್ಲಿ ಚಿರಂತನವಾಗಿ ಬೆಳಗಿವೆ.

ವಾಲ್ಮೀಕಿ ಮಹರ್ಷಿಗಳ ಋಷಿವಾಣಿಯ ಕಾವ್ಯದಿಂದ 'ಶ್ರೀರಾಮ' ಜನಮನದ ಆರಾಧ್ಯದೈವವಾದ, ಮಹರ್ಷಿ ವ್ಯಾಸರ ತಪೋವಾಣಿಯಿಂದ ಭಾರತ, ಭಾಗವತಗಳ 'ಶ್ರೀಕೃಷ್ಣ' ಆರಾಧ್ಯ ದೈವವಾಗಿ ಜನಮನದಲ್ಲಿ ಬೆಳಗಿದ. ಶ್ರೀರಾಮಕೃಷ್ಣರ ಜೀವನವೂ ಇಂತಹ ಒಂದು ಅನನ್ಯವಾದ ಜೀವನ. ಅವರು ಇಟ್ಟಿರುವ ಪ್ರತಿ ಹೆಜ್ಜೆ ಬೆಳಕಿನಹೆಜ್ಜೆ, ಪ್ರತಿ ಶೋಧನೆ ಅನುಭವ ಜನ್ಯ ಸತ್ಯಶೋಧನೆ. ಇಂತಹ ಮಹಿಮಾವಂತರ ಮಹತ್ವದ ಜೀವನದಿಂದ ಪ್ರಭಾವಿತರಾಗಿ ಗ್ರಂಥ ರಚಿಸಿದವರು ವಿಶ್ವದ ಎಲ್ಲ ಪ್ರಮುಖ ಭಾಷೆಗಳಲ್ಲಿ ಇದ್ದಾರೆ. ಮೊಟ್ಟಮೊದಲಿಗೆ ಶ್ರೀರಾಮಕೃಷ್ಣರ ಔನ್ನತ್ಯವನ್ನು ಕುರಿತು ಬರೆದವರು 'ಕೇಶವಸೇನರು' ನಂತರ 'ಮಹೇಂದ್ರನಾಥಗುಪ್ತರು' ಅವರಾದ ಮೇಲೆ ಸ್ವಾಮಿ ಶಾರದಾನಂದರು. ಶ್ರೀರಾಮಕೃಷ್ಣರ ಪ್ರಭಾವ ಹೆಚ್ಚಿದಂತೆ ವಿದೇಶೀ ವಿದ್ವಾಂಸರೂ ಕೃತಿ ರಚನೆ ಮಾಡಿದರು. ಅವರಲ್ಲಿ ಮುಖ್ಯರು ಮೊದಲಿಗರು ಮ್ಯಾಕ್ಸ್‌ಮುಲ್ಲರ್ ಮತ್ತು ರೋಮಾ ರೋಲಾರವರು. ಓದುಗರಿಗೆ ಹೆಚ್ಚು ತಿಳಿದ, ರೋಮಾ ರೋಲಾ ರವರ ಶ್ರೀರಾಮಕೃಷ್ಣರ ಕೃತಿಗೆ ಪ್ರೇರಣೆ ನೀಡಿದ ಮೊದಲ ಆಂಗ್ಲಭಾಷೆಯ ಮನೋಜ್ಞ ಕೃತಿ ಅಮೆರಿಕಾದಲ್ಲಿದ್ದ ಭಾರತೀಯ ಧನ್‌ಗೋಪಾಲ್ ಮುಖರ್ಜಿ ಅವರ 'ರಾಮಕೃಷ್ಣ ದಿ ಫೇಸ್ ಆಫ್ ಸೈಲೆನ್ಸ್' ೧೯೨೬ ರಲ್ಲಿಯೇ ರಚಿತವಾಯಿತು. ಅಮೆರಿಕಾದ ಸ್ಟ್ಯಾನ್‌ಫರ್ಡ್ ವಿದ್ಯಾಸಂಸ್ಥೆಯ ಆಂಗ್ಲ ಪ್ರಾಧ್ಯಾಪಕರು, ಪ್ರಸಿದ್ಧ ವಾಗ್ಮಿ, ಲೇಖಕ, ಕವಿ ಆಗಿದ್ದವರು. ಸ್ವಾಮಿ ವಿವೇಕಾನಂದರ ಪ್ರಿಯಶಿಷ್ಯರಾಗಿದ್ದ ಮೇರಿ ಮ್ಯಾಕ್ಲಿಯೆಡ್ ಅವರ ಆಪ್ತ ಮಿತ್ರರಾಗಿದ್ದರು. ಅಷ್ಟೇ ಅಲ್ಲದೆ ಭಾರತದ ಶ್ರೀರಾಮಕೃಷ್ಣ ಮಹಾಸಂಘದ ಪ್ರಧಾನ ಕೇಂದ್ರವಾದ ಬೇಲೂರು ಮಠದ ಸಂಪರ್ಕದಲ್ಲಿದ್ದರು. ಸ್ವಾಮಿ ಶಿವಾನಂದರಿಂದ ಮಂತ್ರದೀಕ್ಷೆ ಪಡೆದಿದ್ದರು. ನ್ಯೂಯಾರ್ಕ್ ವೇದಾಂತ ಸೊಸೈಟಿಯ ನಿಕಟ ಸಂಪರ್ಕವಿತ್ತು.

ಮುಂದೆ ಶ್ರೀರಾಮಕೃಷ್ಣ ಮಹಾಸಂಸ್ಥೆ ಅಸ್ತಿತ್ವಕ್ಕೆ ಬಂದಮೇಲೆ ಕರ್ನಾಟಕದಲ್ಲಿಯೂ ಈ ಸಂಸ್ಥೆಯ ಶಾಖೆ ಪ್ರಾರಂಭವಾದ ಮೇಲೆ ಕನ್ನಡದಲ್ಲಿ ಶ್ರೀರಾಮಕೃಷ್ಣರ ಜೀವನ ಸಾಧನೆ, ಬೋಧನೆಗಳನ್ನು ಕುರಿತು ಕನ್ನಡನಾಡಿನ ಸಾಹಿತಿಗಳಿಂದ, ಹಿರಿಯ ಯತಿವರ್ಯರಿಂದ ಗ್ರಂಥಗಳ ರಚನೆ ಪ್ರಾರಂಭವಾಯಿತು. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಶ್ರೀರಾಮಕೃಷ್ಣ ಸಾಹಿತ್ಯಶಾಖೆ ಅಂಕುರವಾಗಿ ೮೫ ವರ್ಷಗಳು ದಾಟಿವೆ. ಅದು ಈಗ ಫಲಭರಿತ ವೃಕ್ಷವಾಗಿ, ಸೊಂಪಾಗಿ ಬೆಳದಿದೆ. ಅನುವಾದ ಕೃತಿಗಳು ಮತ್ತು ಸ್ವತಂತ್ರ ಕೃತಿಗಳು ಎರಡೂ ಸಮಸಮವಾಗಿಯೇ ಬೆಳದಿದೆ. ಕನ್ನಡ ನುಡಿಯ ಉದ್ಯಾನವನ ಸರ್ವಧರ್ಮ ಸಮನ್ವಯದ ತಪೋವನವಾಗಿ ತನ್ನ ಹಿರಿಮೆಯನ್ನು ಹೆಚ್ಚಿಸಿಕೊಂಡಿದೆ. ಮಾನವರ ದಿವ್ಯಜೀವನಕ್ಕೆ ಸಂಜೀವಿನಿಯೂ ಆಗಿದೆ.


ಇನ್ನೀಗ ಈ ಎಲ್ಲ ಸಮಗ್ರ ಕೃತಿಗಳಲ್ಲಿ ಮುಖ್ಯಕೃತಿಗಳ ಇಣುಕು ನೋಟವನ್ನು ಕಾಣಬೇಕಾಗಿದೆ. ಇಣುಕಿನಲ್ಲಿ ಮಿಣುಕನ್ನು ಕಾಣಿಸುವುದಷ್ಟೆ ಈ ಲೇಖನದ ಉದ್ದೇಶ.

ಮೊದಲನೆಯ ಗ್ರಂಥ ನಂಗಪುರಂ ಶ್ರೀವೆಂಕಟೇಶ ಅಯ್ಯಂಗಾರ್ ರವರು ಬರೆದಿರುವ 'ಶ್ರೀರಾಮಕೃಷ್ಣ ಉಪದೇಶ ವಾಕ್ಯಾವಳಿ'. ಇದು ಗಾತ್ರದಲ್ಲಿ ಪುಟ್ಟ ಕೃತಿಯಾದರೂ ಕೃತಿಕಾರರು ಇಟ್ಟಿರುವ ಹೆಜ್ಜೆ ದಿಟ್ಟ



ಹೆಜ್ಜೆ, ಮೊದಲ ಹೆಜ್ಜೆ. ೧೯೧೬ರಲ್ಲಿ ಪ್ರಕಟವಾಗಿ ಮೂರು ಆವೃತ್ತಿಗಳನ್ನು ಕಂಡಿದೆ. ೧೭೪ ಪುಟಗಳಲ್ಲಿ ಸಂಪ್ರದಾಯನಿಷ್ಠ ಶೈಲಿಯಲ್ಲಿ ಗ್ರಂಥ ರೂಪುಗೊಂಡಿದೆ. ಖ್ಯಾತ ಪಂಡಿತರಾಗಿದ್ದ ಶ್ರೀ ನಾರಾಯಣ ಶಾಸ್ತ್ರಿಯವರ ಮೌಲ್ಯಯುತ ಮುನ್ನುಡಿ ಇದೆ. ಲೇಖಕರಾದ ವೆಂಕಟೇಶ ಅಯ್ಯಂಗಾರ್ ಅವರು ಕೃತಿ ರಚನೆಯ ಉದ್ದೇಶವನ್ನು ತಿಳಿಸುತ್ತಾ 'ಶ್ರೀರಾಮಕೃಷ್ಣರ ಜೀವನ ಅತ್ಯದ್ಭುತ, ಅತಿಮಾನುಷವಾದುದು, ವೇದಗಳಿಗೆ ಜೀವಕಳೆ' ತುಂಬುವ ವ್ಯಾಖ್ಯಾನವಾಗಿ ಅವರು ಬಾಳಿದ್ದಾರೆ. ಅವರ ಉಪದೇಶ ರತ್ನಗಳು ಕನ್ನಡದ ಭಂಡಾರದಲ್ಲಿ ಇರಬೇಕು, ಕನ್ನಡಿಗರ ಬದುಕು ಹಸನಾಗಬೇಕು' ಎಂದು ಆಶಿಸಿದ್ದಾರೆ. ೫೦ ದೃಷ್ಟಾಂತ ಕತೆಗಳು ಮತ್ತು ೪೮೪ 'ಉಪದೇಶ ವಾಕ್ಯಾವಳಿ'ಯ ಸಂಗ್ರಹ ಇಲ್ಲಿ ನಿರೂಪಿತವಾಗಿದೆ.

ಎರಡನೆಯ ಗ್ರಂಥ ಶ್ರೀ ಚೆನ್ನೇಗೌಡರಿಂದ ರಚಿತವಾದ 'ಶ್ರೀರಾಮಕೃಷ್ಣ ಪರಮಹಂಸದೇವ' ಸಾಮಾನ್ಯ ಓದುಗರಿಗೂ ತಿಳಿಯುವಂತೆ ಸರಳವಾದ ಶೈಲಿಯಲ್ಲಿ ೧೯೨೦-೨೧ರ ನಡುವೆ ಬರೆಯಲಾಗಿದೆ. ''ಲೌಕಿಕವನ್ನು ಪರಮಾರ್ಥದೊಂದಿಗೆ ಸಮನ್ವಯಗೊಳಿಸಿದ ತಪೋನಿಷ್ಠರಾದ ಶ್ರೀರಾಮಕೃಷ್ಣರ ಈ ಪುಣ್ಯ ಕಥೆ ಲೋಕಕ್ಕೆ ತಿಳಿಯಬೇಕು'' ಎಂದು ಆಶಿಸಿ ಬರೆದಿದ್ದಾರೆ.




ಮೂರನೆಯ ಗ್ರಂಥ 'ಶ್ರೀರಾಮಕೃಷ್ಣ ಪರಮಹಂಸರ ಚರಿತ್ರೆ' ೧೯೧೯ರಲ್ಲಿ ರಚಿತವಾಯಿತು. ಕನ್ನಡ ಸಾಹಿತ್ಯಕ್ಷೇತ್ರದ ಪ್ರಖ್ಯಾತ ಆಚಾರ್ಯ ಶ್ರೇಷ್ಠರೂ ಮಹಾನ್ ವಿದ್ವಾಂಸರೂ ಆಗಿದ್ದ ಅಶ್ವಿನೀದ್ವಯರೆಂದೇ ಗೌರವಿತರಾಗಿದ್ದ ಶ್ರೀಟಿ.ಎಸ್.ವೆಂಕಣ್ಣಯ್ಯ ಮತ್ತು ಶ್ರೀ ಎ.ಆರ್. ಕೃಷ್ಣಶಾಸ್ತ್ರಿ ಇವರೀರ್ವರಿಂದ ಲಿಖಿತವಾಯಿತು. ಮೌಲ್ಯಯುತವಾದ ಈ ಗ್ರಂಥ ಬಹುಬೇಗ ೧೯೭೧ರ ವೇಳೆಗೆ ಮೂರು ಮುದ್ರಣಗಳನ್ನು ಕಂಡಿತು. ವಿದ್ವತ್ ಸಾಹಸವೆಂದರೆ ೧೫೦೦ ಪುಟಗಳ 'ಶ್ರೀರಾಮಕೃಷ್ಣ ಲೀಲಾ ಪ್ರಸಂಗ' ಗ್ರಂಥವನ್ನು ಸ್ವಾಮಿ ವಿದೇಹಾನಂದರಿಂದ ಓದಿಸಿ ಕೇಳಿ(ಬಂಗಾಳಿ) ಸಾರವತ್ತಾಗಿ ೮೫ ಪುಟಗಳಲ್ಲಿ ಕನ್ನಡಕ್ಕೆ ನೀಡಿದ್ದು, ಸುಲಿದ ರಸಬಾಳೆಯ ಹಣ್ಣಿನಂತೆ ಕನ್ನಡಿಗರಿಗೆ ಲಭಿಸಲಿ ಎಂದು ಆಶಿಸಿದ್ದಾರೆ. ಶ್ರೀರಾಮಕೃಷ್ಣರು ಭಗವದವತಾರ; ಅವರ ಚರಿತ್ರೆ, ಪುಣ್ಯಚರಿತ್ರೆ, ಭಾಗವತದಂತೆ. ಅವರ ಬೋಧೆಯ ಮನನದಿಂದ ಮಾನವರು ಧನ್ಯರಾಗುತ್ತಾರೆ ಬದುಕು ಸಾರ್ಥಕ ವಾಗುತ್ತದೆ ಎಂಬುದು ಇವರ ದೃಷ್ಟಿ. ಸರ್ವಧರ್ಮ ಸಮನ್ವಯವನ್ನು ಸಾರಿದ ಈ ಮಹಾಚೇತನರನ್ನು ಈ ಕೃತಿರಚನೆಯ ಮೂಲಕ ಸ್ಮರಿಸುವುದೇ ಪರಮಪುಣ್ಯ, ಸಮರ್ಪಣೆಯೇ ಪರಮಭಾಗ್ಯ ಎಂಬ ಧನ್ಯಭಾವ ಕೃತಿಕಾರರಿಬ್ಬರ ಮನದಲ್ಲೂ ತುಂಬಿಹರಿದಿದೆ.

ನಾಲ್ಕನೆಯ ಗ್ರಂಥ ಶ್ರೀ ಆರ್.ಆರ್.ದಿವಾಕರ್‌ರವರು ಬರೆದಿರುವ 'ಶ್ರೀರಾಮಕೃಷ್ಣ ಚರಿತಾಮೃತ' ೧೯೩೧ರಲ್ಲಿ ಕೃತಿಯ ರಚನೆಯಾಯಿತು. ರಾಜಕೀಯ ಕ್ಷೇತ್ರದ ಪ್ರಮುಖರು, ಗಾಂಧೀಜಿಯವರ ಆದರ್ಶದಲ್ಲಿ ನಿಷ್ಠೆಯಿದ್ದ ದೇಶಭಕ್ತರು, ರಾಜ್ಯಪಾಲರ ಹುದ್ದೆಯಲ್ಲಿದ್ದವರು ಅವರು. ಪ್ರಸಿದ್ಧ ಸಾಹಿತಿಗಳೂ ಆದ ಇವರ ಈ ಗ್ರಂಥ ಕನ್ನಡ ಸಾಹಿತ್ಯಲೋಕದಲ್ಲಿ ವಿಶೇಷ ರೀತಿಯ ಮಾನ್ಯತೆಯನ್ನು ಪಡೆದಿದೆ. ಮುಂದೆ ಆಂಗ್ಲ ಭಾಷೆಯಲ್ಲೂ ಇವರಿಂದ ಇದೇ ಕೃತಿ ರಚನೆಯಾಗಿ ಭಾರತೀಯ ವಿದ್ಯಾಭವನದ ಮೂಲಕ ಪ್ರಕಾಶಿತವಾಯಿತು. ಇವರ ಗ್ರಂಥರಚನೆಯಲ್ಲಿ ಕಾಣುವ ಇವರ ಮನೋಧರ್ಮ ಮತ್ತು ಉದ್ದೇಶ ಶ್ರೀರಾಮಕೃಷ್ಣರನ್ನು ಅವತಾರ ಪುರುಷರನ್ನಾಗಿ ಕಾಣುವುದಕ್ಕಿಂತ ಮಾನವಶ್ರೇಷ್ಠರೆಂದು ಕಾಣುವುದೇ ಸೂಕ್ತ ಎನ್ನುವುದು; ಇವರ ಬೋಧೆಯ ಸಾರವಾದ ವಿಶ್ವಧರ್ಮ, ವಿಶ್ವಮೈತ್ರಿ, ವಿಶ್ವಶಾಂತಿ ಇದೇ ತತ್ತ್ವವನ್ನು ಎತ್ತಿ ಹಿಡಿದಿದೆ ಎಂದಿದ್ದಾರೆ.

ಐದನೆಯ ಗ್ರಂಥ ಡಾ. ಕೆ.ವಿ. ಪುಟ್ಟಪ್ಪನವರ 'ಶ್ರೀರಾಮಕೃಷ್ಣ ಪರಮಹಂಸ'. ತಮ್ಮ ಅನ್ಯಾದೃಶ ಕಾವ್ಯಮಯ ಶೈಲಿಯಲ್ಲಿ ಶ್ರೀರಾಮಕೃಷ್ಣರ ಅದ್ಭುತ ಸಮನ್ವಯಾತ್ಮಕ ಜೀವನವನ್ನು ೧೯೩೪ರಲ್ಲಿ ಕೃತಿರೂಪದಲ್ಲಿ ನೀಡಿದ್ದಾರೆ. ಇದಕ್ಕೂ ಮೊದಲೇ ಪ್ರಕಟವಾಗಿದ್ದ 'ಸ್ವಾಮಿ ವಿವೇಕಾನಂದ' ಎಂಬ ಶ್ರೀಪುಟ್ಟಪ್ಪನವರ ಗ್ರಂಥ ಸಾಹಿತ್ಯ ಕ್ಷೇತ್ರದಲ್ಲಿ ಬಹುವಾಗಿ ಮಾನ್ಯತೆ ಪಡೆದು ವಿಶೇಷ ಸ್ಫೂರ್ತಿ ಪ್ರೇರಣೆಗಳನ್ನು ಓದುಗರಿಗೆ ನೀಡಿತ್ತು. ಪರಮಹಂಸರನ್ನು ಕುರಿತ ಗ್ರಂಥ ಆನಂತರ ಪ್ರಕಟವಾಯಿತು. ರಾಷ್ಟ್ರಕವಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ, ವಿದ್ಯಾರ್ಥಿದೆಸೆಯಿಂದಲೇ ಆಶ್ರಮದ ನಿಕಟ ಸಂಪರ್ಕದಲ್ಲಿದ್ದು ಶ್ರೀರಾಮಕೃಷ್ಣರ ಪರಮಭಕ್ತರೂ ಆಗಿದ್ದ ಪುಟ್ಟಪ್ಪನವರ ಈ ಗ್ರಂಥ ಸ್ವಾಮಿ ಆದಿದೇವಾನಂದರು ಹಾರೈಸಿರುವಂತೆ ಕನ್ನಡಿಗರಿಗೆಲ್ಲ ಮಹಾಭಾಗ್ಯದ ಕೊಡುಗೆಯಾಯಿತು. ಅಂದಿನ ಶ್ರೇಷ್ಠ ವಿದ್ವನ್ಮಣಿ, ಗೌರವಾನ್ವಿತ ಆಚಾರ್ಯರಾಗಿದ್ದ ಬಿ.ಎಂ. ಶ್ರೀಕಂಠಯ್ಯ ಅವರು ತಮ್ಮ ಮುನ್ನುಡಿಯಲ್ಲಿ ''ಪರಮಹಂಸರ ಜೀವನ ದಿವ್ಯಜೀವನ, ಅವರ ಘನತೆವೆತ್ತ ಉಪದೇಶ ಸಾರ ಹಿರಿದಾದ ಪ್ರಭಾವವನ್ನುಂಟುಮಾಡಿ ಕನ್ನಡಿಗರಲ್ಲಿ ಧರ್ಮಸಮನ್ವಯ ಬುದ್ಧಿಯನ್ನೂ, ವಿಶಾಲ ಹೃದಯವನ್ನೂ, ವೀರ ಚೈತನ್ಯವನ್ನೂ ನೀಡಲಿ'' ಎಂದು ಶುಭಕೋರಿದ್ದಾರೆ. ಕಾವ್ಯರಸ ಸಿದ್ಧರಾದ ಕವಿ ಕೆ.ವಿ. ಪುಟ್ಟಪ್ಪನವರು ತಮ್ಮ ಗ್ರಂಥದ ಆದ್ಯಂತವೂ ಬ್ರಹ್ಮಜ್ಞಾನ ರಸಸಿದ್ಧರಾದ ಶ್ರೀರಾಮಕೃಷ್ಣರ ಜೀವನ, ಬೋಧನೆಗಳ ಭಾವಧಾರೆಯನ್ನು ರಸಪೂರ್ಣವಾದ ಶೈಲಿಯಲ್ಲಿ ಹರಿಸಿದ್ದಾರೆ. ಶ್ರೀಶಾರದಾದೇವಿಯವರ ವ್ಯಕ್ತಿತ್ವದ ಔನ್ನತ್ಯಕ್ಕೆ ಇಡೀ ಒಂದು ಅಧ್ಯಾಯವನ್ನೇ ಮೀಸಲಾಗಿಟ್ಟು ಗುಪ್ತಗಾಮಿನಿ ಮಹಾತಪಸ್ವಿನಿ ಎಂದು ನಮಿಸಿದ್ದಾರೆ. ಇಡೀ ಗ್ರಂಥ ಒಂದು ತೀರ್ಥಕ್ಷೇತ್ರ, ನಾನೊಬ್ಬ

ಯಾತ್ರಿಕ ಎಂದು ಭಕ್ತಿಸಮನ್ವಿತರಾಗಿ ಕಾವ್ಯದ ತಂಪನ್ನೂ ಪುಣ್ಯ ಚರಿತ್ರೆಯ ಇಂಪನ್ನೂ ಭಾವತನ್ಮಯತೆಯಿಂದ ಹರಸಿದ್ದಾರೆ.

ಆರನೆಯ ಗ್ರಂಥ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರ 'ಶ್ರೀರಾಮ ಕೃಷ್ಣ'. ಶ್ರೀರಾಮಕೃಷ್ಣರ ಜನ್ಮಶತಮಾನೋತ್ಸವದ ಸಂದರ್ಭದಲ್ಲಿ ಅಂದರೆ ೧೯೩೬ರಲ್ಲಿ ಈ ಪುಸ್ತಕ ಪ್ರಕಟವಾಯಿತು. ಆಶ್ರಮದ ಹಿರಿಯ ಸ್ವಾಮಿಗಳಾಗಿದ್ದ ಸ್ವಾಮಿ ಸಿದ್ಧೇಶ್ವರಾನಂದ ಮತ್ತು ಸ್ವಾಮಿ ರಂಗನಾಥಾನಂದರ ಸ್ನೇಹಪೂರ್ವಕ ಒತ್ತಾಯ ಹಾಗೂ ಗುರುಪ್ರೇರಣೆಯಿಂದ ಬರೆದ ಪುಸ್ತಕ. ಕನ್ನಡ ಸಾಹಿತಿಗಳೆಲ್ಲರಿಗೂ ಹಿರಿಯಣ್ಣನಾಗಿ, ಜ್ಞಾನಪೀಠ ಪ್ರಶಸ್ತಿ ಪಡೆದಿದ್ದು, ತಮ್ಮ ಮೌಲ್ಯ ಯುತ ಗ್ರಂಥಗಳಿಂದ ಕನ್ನಡ ಸಾಹಿತ್ಯ ಸಂಪತ್ತನ್ನು ಬೆಳೆಸಿದವರು, ಹಲವಾರು ಸಾಹಿತಿಗಳನ್ನು ಬೆಳಕಿಗೆ ತಂದವರು. ಮಾನವತೆಯ ಅಡಿಗಲ್ಲಿನ ಮೇಲೆ ನಿಂತ ಅವರ ಬುದ್ಧಿಮನಸ್ಸುಗಳು ಮುಕ್ತಿಗಿಂತ ಭಕ್ತಿಯಲ್ಲಿ ಹೆಚ್ಚು ಸುಖಿಸುತ್ತಿತ್ತು. ಸಮರ್ಪಣಾಭಾವ ಅವರ ಸಹಜಧರ್ಮ. ಋಷಿ ಜೀವನದ ಪಾವಿತ್ರ್ಯ, ಕವಿದೃಷ್ಟಿಯ ಸೌಂದರ್ಯ, ಮಾನವಪ್ರೇಮ ವಿನಯದ ಔದಾರ್ಯದ ಹೃದಯ ಶ್ರೀಮಂತಿಕೆ, ಸಾಹಿತ್ಯಕ್ಷೇತ್ರ ಮತ್ತು ಧರ್ಮಕ್ಷೇತ್ರ ಎರಡನ್ನೂ ಸಂಗ ಮಿಸಿಕೊಂಡ ಬರವಣಿಗೆ ಇವು ಮಾಸ್ತಿ ಯವರು ಸಾಹಿತ್ಯಲೋಕಕ್ಕೆ ನೀಡಿರುವ ಆಸ್ತಿ. ಈ ಎಲ್ಲ ಭಾವಸಂಪತ್ತನ್ನೂ ''ಶ್ರೀ ರಾಮಕೃಷ್ಣ'' ಗ್ರಂಥದಲ್ಲಿ ಸ್ಪಷ್ಟವಾಗಿ ಕಾಣಬಹುದು. ಪರಮಹಂಸರನ್ನು ಕುರಿತಾಗಿ ಅವರ ನಿಲುವು ಹೀಗಿದೆ:




''ಶ್ರೀರಾಮಕೃಷ್ಣರ ಹೆಸರನ್ನು ಹೇಳುವ ನಾಲಿಗೆ ಯಾವ ಮತದ ವಿಷಯ ದಲ್ಲಿಯೂ ಅಗೌರ ವದ ನುಡಿಗಳನ್ನು ನುಡಿಯಲಾರದು, ಎಲ್ಲ ಮತಗಳನ್ನೂ ಗೌರವದಿಂದ ಕಾಣುವುದೇ ಆ ಗುರುವಿನ ಉಪದೇಶದ ಸಂಪರ್ಕ ದಿಂದ ಬರುವ ಮನೋಧರ್ಮ. ದೇವರು ಮನುಷ್ಯನಾಗಿ ನಡೆದ ಎಂದರೂ, ಮನುಷ್ಯ ನಡತೆಯಿಂದ ದೇವರಾದ ಎಂದರೂ ಒಂದೇ ರೀತಿಯ ಮರ್ಯಾದೆ ತೋರಿದಂತೆ, ರಾಮಕೃಷ್ಣರು ಹುಟ್ಟಿನಿಂದಲೇ ಋಷಿಕವಿ. ಆದರಿಂದಲೇ ಅವರ ಮಾತಿನಲ್ಲಿ, ದೃಷ್ಟಾಂತ ಕಥೆಗಳಲ್ಲಿ ಆ ಸೊಗಸು, ಸಹಜತೆ, ಭಾವರಮ್ಯತೆ, ತಿಳಿ ವಿನ ಹೊಳಹು'' ಎಂದಿದ್ದಾರೆ. ಒಬ್ಬ ಗುರುವಿನದೆಂದು ಪ್ರಪಂಚ ದಲ್ಲಿ ಹರಡಿರುವ ಯಾವ ಉಪದೇಶ ಸೂಕ್ತಿಯೂ ಬಲದಲ್ಲಿ ಬೆಲೆಯಲ್ಲಿ ಇವೆರಡಕ್ಕಿಂತ ಹೆಚ್ಚಿನದಿರಲಾರದು. ಬದುಕಿನ ಬಳಕೆ ಯಲ್ಲಿ ದ್ವೈತ, ತಿಳಿವಿನಲ್ಲಿ ವಿಶಿಷ್ಟಾದ್ವೈತ, ಅನುಭವದಲ್ಲಿ ಅದ್ವೈತ ಇದು ರಾಮಕೃಷ್ಣರ ಜೀವನದ ಪಲ್ಲವಿ. ಸರ್ವಭಾವ, ಸರ್ವಧರ್ಮ, ಸರ್ವತತ್ತ್ವದ ಸಮನ್ವಯದ ದೇಗುಲದಲ್ಲಿ, ಶ್ರೀರಾಮಕೃಷ್ಣರು ಉಜ್ವಲವಾಗಿ ಬೆಳಗುವ ನಂದಾದೀವಿಗೆ ಎಂದು ನಮಿಸಿದ್ದಾರೆ.

ಏಳನೆಯ ಗ್ರಂಥ 'ವಿಶ್ವಧರ್ಮಕ್ಕೆ ಶ್ರೀರಾಮಕೃಷ್ಣ ಪರಮ ಹಂಸರ ಕೊಡುಗೆ.' ಡಾ. ಎಲ್ ಬಸವರಾಜು ಅವರು ತತ್ತ್ವ ಶಾಸ್ತ್ರ ವಿಭಾಗದಿಂದ, ಸಂಶೋಧನ ಕೃತಿಯಾಗಿ ಬರೆದಿದ್ದಾರೆ. ಡಾ. ವಿ.ಎಸ್. ಶೇಷಗಿರಿರಾವ್ ಅವರ ಮಾರ್ಗದರ್ಶನದಲ್ಲಿ ೧೯೯೧ರಲ್ಲಿ ಪ್ರಕಟಿಸಿದ್ದಾರೆ. ಅವರ ಅಧ್ಯಯನದ ಉದ್ದೇಶ ಸಹಜವಾಗಿಯೇ ಸನಾತನ ಧರ್ಮದ ತತ್ತ್ವದರ್ಶನ ಮತ್ತು ಶ್ರೀರಾಮಕೃಷ್ಣರ ಸರ್ವಧರ್ಮ ಸಮನ್ವಯ ದರ್ಶನದ ತೌಲನಿಕ ಅಧ್ಯಯನವೇ ಆಗಿದೆ. ''ತಮ್ಮ ಬದುಕನ್ನು ಒಂದು ಪ್ರಯೋಗ ಶಾಲೆಯನ್ನಾಗಿ ಮಾಡಿಕೊಂಡು ಅನುಭವದ ಭದ್ರಬುನಾದಿಯ ಮೇಲೆ ನಿಂತು ಬೋಧಿಸಿದ ಮೇರುಪುರುಷ, ವಿಶ್ವಧರ್ಮದ ಆವಶ್ಯಕತೆಯನ್ನು ಮುಕ್ತಕಂಠದಿಂದ ಸಾರಿದ ದೇವಮಾನವ.'' ಇದು ಕೃತಿಕಾರರು ಈ ಕೃತಿಯಲ್ಲಿ ನಿರೂಪಿಸಿರುವ ಪ್ರಮುಖ ಚಿಂತನೆ.

ಎಂಟನೆಯ ಪುಟ್ಟಗ್ರಂಥ. 'ಪರಮಹಂಸರ ಮಾತುಕತೆಗಳು' ೨೦೦೫ರಲ್ಲಿ ಪ್ರಕಟವಾಯಿತು ವೇದನಿಧಿ ವಿದ್ಯಾಲಂಕಾರ, ಶಾಸ್ತ್ರ ಚೂಡಾಮಣಿ, ಮನೋವಿಜ್ಞಾನದ ಆಚಾರ್ಯ ಶ್ರೀ ಸಾಲಿ ಗ್ರಾಮ ರಾಮಚಂದ್ರರಾಯರು ಇದರ ಲೇಖಕರು. ಸ್ವಾಮಿ ತ್ಯಾಗೀಶಾನಂದರ ಆತ್ಮೀಯ ಸಂಪರ್ಕವಿದ್ದು ಶ್ರೀರಾಮಕೃಷ್ಣರ ಪರಮಭಕ್ತರೂ ಆಗಿದ್ದವರು. ಶಿಲ್ಪ, ಚಿತ್ರಕಲಾವಿದ, ಸಂಗೀತ ತಜ್ಞ, ಬಹುಭಾಷಾ ಪರಿಣತರಾದ ಈ ಮಹಾಸಾಹಿತಿ ೧೯೪೮ ರಲ್ಲೆ ಬಂಗಾಳಿ ಭಾಷೆಯ ಮೂಲ ಅಧ್ಯಯನದಿಂದ ಪುಸ್ತಕ ರಚನೆಯ ಸಿದ್ಧತೆ ನಡೆಸಿದ್ದರು. ಅದು ಸಾಧ್ಯವಾಗದೆ ತಮ್ಮ ಕೊನೆ ದಿನಗಳಲ್ಲಿ ಈ ಕಿರುಹೊತ್ತಿಗೆಯು ಶ್ರೀರಾಮಕೃಷ್ಣರಿಗೆ ಸಮರ್ಪಿತ ವಾಯಿತು. ಈ ಅಪರೂಪದ ಕೃತಿಯಲ್ಲಿ ಶ್ರೀರಾಮಕೃಷ್ಣರ ಜೀವನ ವೈಶಿಷ್ಟ್ಯ ಮತ್ತು ಶಿಷ್ಯರೊಂದಿಗೆ ಆದ ೬೮ ಮನೋಜ್ಞ ಪ್ರಸಂಗಗಳ ನಿರೂಪಣೆ ಇದೆ. ಆಕೃತಿಯಿಂದ ಚಿಕ್ಕದಾದರೂ ಸತ್ವ ದಿಂದ ಹಿರಿದಾಗಿದೆ.

ಇದುವರೆಗೆ ಕರ್ನಾಟದ ಸಾಹಿತಿಗಳಿಂದ ರಚಿತವಾದ ಸಾಹಿತ್ಯ ಪ್ರಧಾನ ಗ್ರಂಥಗಳನ್ನು ವಿವರಿಸಿದ ಮೇಲೆ ಶ್ರೀರಾಮ ಕೃಷ್ಣ ಆಶ್ರಮದ ಹಿರಿಯ ಯತಿಗಳು ಗುರುಭಾವದಲ್ಲಿ ತಮ್ಮ ಚಿಂತನಾಧಾರೆಯನ್ನು ಹರಿಸಿರುವ ಗ್ರಂಥಗಳನ್ನು ಉಲ್ಲೇಖಿಸ ಬೇಕಾಗುತ್ತದೆ. ಮೊದಲಾನೆಯದಾಗಿ ಸ್ವಾಮಿ ಸೋಮನಾಥಾ ನಂದರ ಗ್ರಂಥಗಳಾದ 'ತ್ರಿವೇಣೀ' 'ದೀಪಧಾರಿ' 'ಭಗವಾನ್ ರಾಮಕೃಷ್ಣ' ಹಾಗೂ 'ಗುರುದೇವ ರಾಮಕೃಷ್ಣ'. 'ತ್ರಿವೇಣೀ' ೧೯೫೧ರಲ್ಲಿ ಪ್ರಕಟವಾಯಿತು; ೧೦೪ ಪುಟಗಳನ್ನೊಳಗೊಂಡ ಈ ಪುಟ್ಟ ಕೃತಿ ಹೆಸರಿಗನುಗುಣವಾಗಿಯೇ ದಿವ್ಯತ್ರಯರ ಜೀವ ನದ ಮಹತ್ವದ ವಿವರಣೆ ನೀಡಿದೆ. 'ದೀಪಧಾರಿ' ೧೯೫೪ರಲ್ಲಿ

ಪ್ರಕಾಶಿತವಾಗಿ ೯೩ ಪುಟಗಳ ವ್ಯಾಪ್ತಿಯಲ್ಲಿದೆ. ಇದೂ ಸಹ ಶೀರ್ಷಿಕೆಗೆ ತಕ್ಕಂತೆ ಭಕ್ತರಿಗೆ ಅವರ ಸಾಧನೆಯ ದಾರಿಯಲ್ಲಿ ಬೆಳಕು ಮೂಡಿಸಿದ ಶ್ರೀರಾಮಕೃಷ್ಣರ ದಿವ್ಯಬೋಧನೆಯ ಉಜ್ವಲತೆಯನ್ನು ತಿಳಿಸುತ್ತದೆ. 'ಭಗವಾನ್ ರಾಮಕೃಷ್ಣ' ೧೯೫೪ರಲ್ಲಿ ರಚಿತವಾಯಿತು. ೨೨೮ ಪುಟಗಳ ವಿಷಯ ವಿಸ್ತಾರದಲ್ಲಿ ೩೪ ಅಧ್ಯಾಯಗಳಲ್ಲಿ ಭಗವತ್‌ಸ್ವರೂಪರೂ ಅವತಾರವರೇಣ್ಯರೂ ಆದ ಶ್ರೀರಾಮಕೃಷ್ಣರ ಜೀವನದ ಹಿರಿಮೆ, ವ್ಯಕ್ತಿತ್ವದ ಔನ್ನತ್ಯ, ಶಿಷ್ಯವಾತ್ಸಲ್ಯ, ಅನುಭವದಿಂದ ತುಂಬಿದ ತಿಳಿಯಾದ ಬೋಧೆ ಇವು ಮೂಡಿಬಂದಿವೆ. ಪ್ರಧಾನವಾಗಿ ಸುಗಮವಾದ, ಲಲಿತವಾದ ಶೈಲಿಯಲ್ಲಿ ಭಕ್ತರಾದ ಓದುಗರಿಗೆ ಮನಮುಟ್ಟುವಂತೆ ಆತ್ಮೀಯ ಭಾವದಲ್ಲಿ ವಿಷಯವನ್ನು ತಿಳಿಸುತ್ತಾ ಹೊಸದೊಂದು ಬೆಳಕನ್ನು ಕಾಣಿಸಿದ್ದಾರೆ. 'ಗುರುದೇವ ರಾಮಕೃಷ್ಣ' ೧೯೭೨ರಲ್ಲಿ ಪ್ರಕಟವಾಗಿ ಗುರುಸ್ವರೂಪರಾದ ಶ್ರೀರಾಮಕೃಷ್ಣರಲ್ಲಿಗೆ ಬಂದ ಗೃಹಸ್ಥ ಭಕ್ತರ ಹಾಗೂ ಯತಿಶಿಷ್ಯರ ಜೀವನವನ್ನು ಭಗವನ್ಮಯವಾಗಿ ಪರಿವರ್ತಿಸಿದ ದೇವಶಿಲ್ಪಿ-ಗುಪ್ತ ಶಿಲ್ಪಿ ಶ್ರೀರಾಮಕೃಷ್ಣರ ಅಪೂರ್ವ ವ್ಯಕ್ತಿತ್ವದ ಚಿತ್ರಣವಿದೆ. ಸ್ವಾಮಿ ಶಿವಾನಂದರಿಂದ ಮಂತ್ರದೀಕ್ಷಿತರಾಗಿದ್ದ ಸ್ವಾಮಿ ಸೋಮನಾಥಾನಂದರು ಈ ಎಲ್ಲ ಕೃತಿಗಳಲ್ಲಿಯೂ ಭಕ್ತಿಭಾವದ ಸಮರ್ಪಣಾಭಾವವನ್ನು ತೋರಿಸಿದ್ದಾರೆ. ಇವರ ಲೇಖನಕಲೆಯಲ್ಲಿ ಸಾಹಿತ್ಯದ ಸೊಗಸು, ಹಾಗೂ ಭಾವರಮ್ಯತೆಯ ಸಂಗಮ ಇವು ತುಂಬಿವೆ. ಸ್ವಾಮಿ ಸೋಮನಾಥಾನಂದರು ಭಕ್ತವಲಯದಲ್ಲಿ ಪುಣ್ಯಸ್ಮರಣೀಯರಾಗಿ, ಕೃತಿ ಸಮರ್ಪಣೆಯ ಪೂಜೆಯಲ್ಲಿ ಮೊದಲ ಅರ್ಚಕರಾಗಿ ವಂದನೀಯರಾಗಿದ್ದಾರೆ.

ಮುಂದಿನ ಯತಿವರ್ಯರು ಸ್ವಾಮಿ ಪುರುಷೋತ್ತಮಾನಂದರು ವಾಗ್ಮಿ, ಲೇಖಕ, ಸಂಕೀರ್ತನಾಕಾರ, ಆತ್ಮೀಯ ಗುರು, ಆದರಣೀಯ ಯತಿ ಎಲ್ಲವೂ ಆಗಿ ಜನಮನದಲ್ಲಿ ಚಿರಸ್ಮರಣೀಯರಾಗಿದ್ದಾರೆ. ಇವರಿಂದ ರಚಿತವಾದ 'ಯುಗಾವತಾರ ರಾಮಕೃಷ್ಣ' ೧೯೮೯ ರಿಂದ ೧೯೯೧ರ ಕಾಲಾವಧಿಯಲ್ಲಿ ನಾಲ್ಕು ಸಂಪುಟಗಳಲ್ಲಿ ಬೃಹತ್‌ಗಾತ್ರದಲ್ಲಿ ಪ್ರಕಟವಾಯಿತು. ಇದು ಒಂದು ಜ್ಞಾನಯಜ್ಞವೆಂದೇ ಹಿರಿಯ ಯತಿಗಳೆಲ್ಲ ಮನಸಾರೆ ಕೊಂಡಾಡಿದ್ದಾರೆ. ಕೃತಿಕಾರರು ತಮ್ಮ ಕೃತಿರಚನೆಯ ಉದ್ದೇಶವನ್ನು ತಿಳಿಸುತ್ತಾ, ''ಶ್ರೀರಾಮಕೃಷ್ಣರ ಜೀವನವನ್ನು ಅತ್ಯಂತ ಸರಳವಾಗಿ, ಸಾದ್ಯಂತವಾಗಿ, ಸವಿವರವಾಗಿ, ಸಾಮಾನ್ಯನಿಗೂ ಕಣ್ಣಿಗೆ ಕಟ್ಟುವಂತೆ, ತನ್ಮೂಲಕ ಆ ಜೀವನದೀಪದ ಸಹಾಯದಿಂದ ತನ್ನ ಸೊಡರನ್ನು ಬೆಳಗಿಸಿಕೊಳ್ಳಲು ಅನುವುಮಾಡಿಕೊಡುವುದು'' ಎಂದಿದ್ದಾರೆ. ಈ ಉದ್ದೇಶ ಸಂಪೂರ್ಣವಾಗಿ ಯಶಸ್ವಿಯಾಗಿ ಸಫಲಗೊಂಡಿದೆ. ತನ್ನ ವಿಷಯವ್ಯಾಪ್ತಿಯಿಂದ ಸರ್ವಸಂಪನ್ನ ವಿವರಣೆಯಿಂದ ಸಾಹಿತ್ಯ ಕ್ಷೇತ್ರದಲ್ಲಿ ಉನ್ನತ ಸ್ಥಾನವನ್ನು ಅಲಂಕರಿಸಿ ಭಕ್ತರಿಂದ ಪೂಜಿತವಾಗಿದೆ.

ಸ್ವತಂತ್ರ ಕೃತಿಗಳ ಅವಲೋಕನದ ನಂತರ ಅನುವಾದಿತ ಕೃತಿಗಳನ್ನೂ ಅದರ ವೈಶಿಷ್ಟ್ಯವನ್ನೂ, ಗಮನಾರ್ಹ ಸೇವೆಯನ್ನೂ ಒಂದೆರಡು ಮಾತಿನಲ್ಲಿ ತಿಳಿಸಬೇಕಾಗುತ್ತದೆ. ಅನುವಾದ ಸುಲಭ ಕಾರ್ಯವಲ್ಲ. ಮೂಲ ಕೃತಿಕಾರನ ಭಾಷಾಶೈಲಿ, ಭಾವದ ಹರಿವು, ವಿಚಾರದೃಷ್ಟಿ ಇವನ್ನೆಲ್ಲ ತಿಳಿದು ಅದೇ ನಿಲುವಿನಲ್ಲಿ ಎಲ್ಲೂ ಲೋಪವಾಗದಂತೆ ಅನುವಾದ ನಡೆಸಬೇಕಾಗುತ್ತದೆ. ಇದಕ್ಕೆ ಎರಡೂ ಭಾಷೆಗಳಲ್ಲಿ ಪರಿಣತಿ ಇರಬೇಕಾಗುತ್ತದೆ. ಕೃತಿಯ ಹಿರಿಮೆಗೆ ಕುಂದುಂಟಾಗದಂತೆ ನೆರವೇರಿಸುವ ಈ ಕಾರ್ಯ ಗುರುತರವಾದ ಹೊಣೆಗಾರಿಕೆಯಿಂದ ಕೂಡಿದೆ. ಕನ್ನಡ ಸಾಹಿತಿಗಳು, ಈ ದಿಶೆಯಲ್ಲಿಯೇ ತಮ್ಮ ಗಣನೀಯವಾದ, ಸಮರ್ಪಕವಾದ ಸೇವೆ ಸಲ್ಲಿಸಿದ್ದಾರೆ. ಆ ಎಲ್ಲ ಕೃತಿಗಳ ಮತ್ತು ಕೃತಿಕಾರರ ಸಂಕ್ಷಿಪ್ತಮಾಹಿತಿ ಹೀಗಿದೆ.

೧) 'ಶ್ರೀರಾಮಕೃಷ್ಣವಚಾನಮೃತ' ೧೯೨೫ರಲ್ಲಿ ಶ್ರೀ ಎಸ್.ಜಿ. ಗೋವಿಂದರಾಜ ಅಯ್ಯಂಗಾರ್‌ರವರಿಂದ ೨) 'ಶ್ರೀರಾಮಕೃಷ್ಣ ಜೀವನ ಚರಿತ್ರೆ' ೧೯೨೪ರಲ್ಲಿ, ಖ್ಯಾತ ಸಾಹಿತಿ ಶ್ರೀ ಶಿವರಾಮ ಕಾರಂತರಿಂದ ೩) 'ಶ್ರೀರಾಮಕೃಷ್ಣ' ಲೇಖಕರು, ಶ್ರೀಕೃಷ್ಣ ಮೂರ್ತಿ ೪) 'ಶ್ರೀರಾಮಕೃಷ್ಣ ವಚನಾಮೃತ' ೧೯೩೫ರಲ್ಲಿ ಖ್ಯಾತ ಸಾಹಿತಿ ಆಚಾರ್ಯ ಟಿ.ಎಸ್. ವೆಂಕಣ್ಣಯ್ಯ ೫) ಶ್ರೀ ನಾರಾಯಣ ಶರ್ಮ ಅವರ 'ವಚನಾಮೃತ' ೬) ಶ್ರೀರಾಮಕೃಷ್ಣ ಲೀಲಾಪ್ರಸಂಗ (ಇಡೀ ಕೃತಿ) ಸ್ವಾಮಿ ಪ್ರಣವೇಶಾನಂದ ೧೯೫೫ರಲ್ಲಿ ; ಸ್ವಾಮಿ ನಿತ್ಯಸ್ಥಾನಂದ ೧೯೯೪ರಲ್ಲಿ ೭) ಸ್ವಾಮಿ ಸೋಮನಾಥಾನಂದ – 'ಶ್ರೀರಾಮಕೃಷ್ಣ ಶಿಷ್ಯಕೋಟಿ'. ೮) ಶ್ರೀರಾಮಕೃಷ್ಣ ವಚನವೇದ ೧೯೫೪ರಲ್ಲಿ ಡಾ.ಕೆ.ವಿ.ಪುಟ್ಟಪ್ಪನವರ ನೇತೃತ್ವದಲ್ಲಿ ಅವರ ಸಾಹಿತಿ ಶಿಷ್ಯರೊಂದಿಗೆ ರೂಪುಗೊಂಡಿತು. ಪೂರ್ವಾರ್ಧ ಮತ್ತು ಉತ್ತರಾರ್ಧ ಸಹಿತ ಪೂರ್ಣಕೃತಿ. ಬಂಗಾಳಿಯ 'ಶ್ರೀರಾಮಕೃಷ್ಣ ಕಥಾಮೃತ'ವು ಕುವೆಂಪು ಅವರಿಂದಲೇ 'ಶ್ರೀರಾಮಕೃಷ್ಣ ವಚನವೇದ' ಎಂದು ನಾಮಾಂತರವನ್ನು ಪಡೆಯಿತು.

ಶ್ರೀರಾಮಕೃಷ್ಣ ಪರಮಹಂಸರನ್ನು ಕುರಿತ ಕನ್ನಡ ಕೃತಿಗಳ ಸಾಹಿತ್ಯಭಂಡಾರ ಧಾರ್ಮಿಕವಾಗಿ, ಸಾಹಿತ್ಯಕವಾಗಿ, ವೈಚಾರಿಕವಾಗಿ ಈ ಮೂರೂ ನೆಲೆಗಳಲ್ಲಿಯೂ ಸಂಪದ್ಭರಿತವಾಗಿದೆ. ಶ್ರೇಷ್ಠ ಸಾಹಿತಿಗಳ, ಹಿರಿಯ ಯತಿವರ್ಯರ ಚಿಂತನೆಯ ಬೆಳಕಿನಲ್ಲಿ ಶ್ರೀರಾಮಕೃಷ್ಣರ ವ್ಯಕ್ತಿತ್ವದ ಒಂದು ಸಂಜೀವಿನಿಯಾಗುತ್ತದೆ. ಲೇಖಕರ ತಿಳಿವಿನ ಹೊಳಹಿನಲ್ಲಿ ಅವರ ಸ್ವರೂಪವನ್ನು ಕಾಣುವಾಗ ಅವರ ಸುತ್ತ ಸಪ್ತವರ್ಣದ ಕಾಂತಿಯ ಪ್ರಭಾವಲಯ ಮೂಡುತ್ತದೆ. ಅಂತರಂಗ ತರಂಗಮಯವಾಗುತ್ತದೆ. ಕನ್ನಡದ ಕೃತಿಕಾರರೆಲ್ಲ ಸಲ್ಲಿಸಿರುವ ಈ ಕೃತಿಸಮರ್ಪಣೆಯ ಪೂಜೆ ಒಂದು ರೀತಿಯಲ್ಲಿ ಅಕ್ಷರಾರ್ಚನೆ, ಭಕ್ತಿಭಾವ ನಿವೇದನೆ, ಚಿಂತನ ನೀರಾಂಜನದ ದೀಪಾಂಜಲಿ. ಕನ್ನಡದ ತಾಯಿ ಭುವನೇಶ್ವರಿ ಇದರಿಂದ ಪ್ರಸನ್ನಳಾಗಿ ನಮ್ಮನ್ನೆಲ್ಲ ಹರಸಲಿ.